# ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು !

**ಪ್ರೊ . ಜಿ.ಎಚ್. ಹನ್ನೆರಡುಮಠ**

ನಮ್ಮ ಭಾವ-ಬುದ್ಧಿಗಳನ್ನು ಪೋಷಿಸಿ, ಆತ್ಮೋನ್ನತಿಗೆ ಕಾರಣವಾಗಬಲ್ಲ ಮನಸ್ಸು ಎಷ್ಟೊಂದು ವಿಸ್ಮಯದ ಸಂಗತಿಯೆಂಬುದನ್ನು ಚಿಂತಿಸಿದಷ್ಟೂ ಅಚ್ಚರಿಯೆನಿಸುತ್ತದೆ. ಈ ಕುರಿತು ವಿವರಿಸುವ ಲೇಖಕರು, ಬಾಗಲಕೋಟೆ ಜಿಲ್ಲೆಯ ಇಳಕಲ್‌ನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಬಳಿಕ ಪ್ರಾಂಶುಪಾಲರಾಗಿ ನಿವೃತ್ತರಾದವರು. ಕವಿತೆ, ಕಥೆ, ಕಾದಂಬರಿ, ವಿಚಾರ ಸಾಹಿತ್ಯವೇ ಮೊದಲಾದ ಪ್ರಕಾರಗಳಲ್ಲಿ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿರುವ ಅವರು ಪ್ರಸ್ತುತ ಬೆಂಗಳೂರಿನಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ.

ವಿಶ್ವದ ಮಹಾನ್ ಅಚ್ಚರಿ ಅಂದರೆ.... ಒಬ್ಬನ ಮುಖದಂತೆ ಇನ್ನೊಬ್ಬನ ಮುಖವಿಲ್ಲ , ಒಬ್ಬನ ಸ್ವಭಾವದಂತೆ ಇನ್ನೊಬ್ಬನ ಸ್ವಭಾವವಿಲ್ಲ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ.... 'ಬಂದ ಕಾಲಗುಣವೋ ನಿಂದ ನೆಲದ ಗುಣವೋ' ಎಂದು ವಿಶ್ವಾಮಿತ್ರನ ಆಶ್ರಮಕ್ಕೆ ದಾರಿತಪ್ಪಿ ಬಂದ ಹರಿಶ್ಚಂದ್ರ ಪರಿತಪಿಸುತ್ತಾನೆ. ಅಲ್ಲಿಯ ಪ್ರಕೃತಿ ಪರಿಸರದಲ್ಲಿ ವಿಕೃತಿ ಅಲೆಗಳು ಹರಿಶ್ಚಂದ್ರನ ಮಾನಸಿಕ ಪಟಲದ ಮೇಲೆ ತರಂಗಗಳನ್ನು ಹರಡಿದ್ದು ತೋರುತ್ತವೆ. ಅಲ್ಲದೆ ; ಕುಲ-ಹೊಲೆಗಳು ಜಾತಿಮೂಲವಲ್ಲ , ಗುಣ ಮೂಲ.... ಎಂದು ರಾಘವಾಂಕ ಇದೇ ಹರಿಶ್ಚಂದ್ರ ಕಾವ್ಯದಲ್ಲಿ ಘಂಟಾಘೋಷವಾಗಿ ಸಾರಿದ್ದಾನೆ. ಶರಣರುಕೂಡ ಮನದ ಕೋಪ ತನ್ನ ಅರುಹಿನ ಕೇಡು ಎಂದೂ, ಅಲ್ಲದೆ; ಹೊಲಬು ತಪ್ಪಿದವನೇ ಹೊಲೆಯ.... ಅಂದರೆ ಸತ್ಯದ ದಾರಿ ಬಿಟ್ಟವನೇ ಕೀಳು ಎಂದು ವಚನಿಸಿದ್ದಾರೆ.

ಇಂದಿಗೂ ಕೂಡ ಪರಸ್ಪರ ಮದುವೆ ಸಂಬಂಧಗಳನ್ನು ಏರ್ಪಡಿಸುವಲ್ಲಿ ಉಭಯ ಮನೆತನಗಳ ಗುಣಮೂಲಗಳನ್ನು, ಆಚಾರ - ವಿಚಾರಗಳನ್ನು ಅನುಭವಿಗಳಾದ ಹಿರಿಯರು ಕೂಲಂಕಷವಾಗಿ ಜಾಲಾಡಿಸಿ ನೋಡುತ್ತಾರೆ. ಇಲ್ಲವಾದರೆ.... ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆಯುತ್ತದೆ ಅಂತ ಅವರ ಗಟ್ಟಿಯಾದ ತಿಳುವಳಿಕೆ.

ನಮ್ಮ ಮಾನಸಿಕ ಗಗನದಲ್ಲಿ ಸ್ಥಾಯಿಭಾವ ಸಂಚಾರಿಭಾವಗಳೆಂದು ಅಸಂಖ್ಯಾತ ಟೊಂಗೆ-ಟಿಸಿಲುಗಳಿರುವುದನ್ನು ಭರತ ಮುನಿ ಬಹುಕಾಲದ ಹಿಂದೆಯೇ ತನ್ನ ನಾಟ್ಯಶಾಸ್ತ್ರ ಕೃತಿಯಲ್ಲಿ ವಿವರವಾಗಿ ಲೆಕ್ಕಹಾಕಿ ಹೇಳಿದ್ದಾನೆ. ಕಾಮ- ಕ್ರೋಧ- ಲೋಭ-ಮೋಹ-ಮದ-ಮತ್ಸರಗಳೆಂದು ಮನುಷ್ಯನ ಮಾನಸಿಕ ವಿಭಿನ್ನತೆಗಳನ್ನು ಭಾರತೀಯ ತತ್ತ್ವಶಾಸ್ತ್ರವು ಪದರು-ಪದರು ಬಿಚ್ಚಿಬಿಡಿಸಿ ಹೇಳಿದೆ. ಇದರೊಂದಿಗೆ ಬರುವ ಅಸಂಖ್ಯಾತ ಸಂಚಾರಿಭಾವಗಳಿಗೆ ಲೆಕ್ಕವೇ ಇಲ್ಲ. ಸಮುದ್ರದ ಮೇಲಿನ ಅಸಂಖ್ಯ ನೊರೆ ತೊರೆಗಳಂತೆ ನಮ್ಮ ಮಾನಸಿಕ ಪದರುಗಳಲ್ಲಿ ಅಸಂಖ್ಯಾತ ಉಪ ಭಾವಗಳನ್ನು ಕಾವ್ಯಶಾಸ್ತ್ರದಲ್ಲಿ ವಿಸ್ತೃತವಾಗಿ ಹೇಳಲಾಗಿದೆ. ಆಶ್ರಮದ ಗಿಳಿಯ ಭಾಷೆಯೇ ಬೇರೆಯೆಂದೂ, ಪ್ರಾಣಿಹಿಂಸೆ ಮಾಡುವವರ ಮನೆಯಲ್ಲಿ ಅದೇ ಗಿಳಿಯ ಸಹೋದರ ಗಿಳಿಯ ಭಾಷೆಯೇ ಬೇರೆಯೆಂದು ಪಂಚತಂತ್ರದ ಕಥೆ ತಿಳಿಸಿದೆ.



ಶ್ರೀ ಅರವಿಂದರು ನಮ್ಮ ಮನಸ್ಸಿನ ಒಳಾಂಗಣಗಳನ್ನು ಇನ್ನರ್ ಕಾನ್‌ಸೆಸ್‌ನೆಸ್ ಎಂದು ಗುರುತಿಸಿ, ಅದರಲ್ಲಿ ಊರ್ಧ್ವ ಮಾನಸ.... ಅಂದರೆ ಇಲ್ಯೂಮಿನ್ಡ ಮೈಂಡ್... ಓವರ್ ಮೈಂಡ್.... ಅತೀತ ಮನಸ್ಸು.... ಪ್ರಾಣಮಾನಸ... ಅಂದರೆ ಸೈಕಿಕ್ ಮೈಂಡ್.... ಲೋವರ್ ಮೈಂಡ್.... ಕೆಳಮನೆ ಮನಸ್ಸು .... ಫಿಜಿಕಲ್ ಮೈಂಡ್.... ಭೌತಮನ..... ಹಾಗೂ ನಿಮ್ನ ಮಾನಸ ಪ್ರಜ್ಞೆ ಇಲ್ಲವೇ ಅಚೇತನ..... ಅಂದರೆ ಅನ್‌ಕಾನಸೆಸ್ ಲೆವೆಲ್ ಆಫ್ ಮೈಂಡ್.... ಎಂದು ತಮ್ಮ ಸಿಂಥೆಸಿಸ್ ಆಫ್ ಯೋಗ..... ಯೋಗಸಮನ್ವಯ..... ಎಂಬ ಗ್ರಂಥದಲ್ಲಿ ವಿವರವಾಗಿ ತಿಳಿಸಿದ್ದಾರೆ. ಇವೆಲ್ಲವುಗಳ ಸಹಜ ಸಂಸ್ಕಾರವೇ ಒಟ್ಟಾರೆಯಾಗಿ ನಮ್ಮ ಸ್ವಭಾವವೆಂದು ಕರೆಯಲ್ಪಡುತ್ತದೆ. ಇಂಥ ಜಡ ಹಾಗೂ ಜಟಿಲ ಸ್ವಭಾವ ಹಾಗೂ ಸಂಸ್ಕಾರಗಳನ್ನು ಕೂಡ ಯೋಗದಿಂದ ಬದಲಿಸಬಹುದೆಂದು ವಿವೇಕಾನಂದರು ಹೇಳಿ

ದ್ದಾರೆ. ಅದನ್ನು ಅವರು ಟ್ರಾನ್ಸಫಾರ್ಮೇಶನ್ ಎಂದು ಕರೆದರೆ; ಶರಣರು ಅದನ್ನೇ ಆತ್ಮಕಲ್ಯಾಣ ಹಾಗೂ ಲೋಕಕಲ್ಯಾಣ ಎಂದು ಗುರುತಿಸಿದ್ದಾರೆ.

ಕನ್ನಡದ ಕವಿಯಿತ್ರಿ ವಚನಕಾರ್ತಿ ಅಕ್ಕಮಹಾದೇವಿ ಕೂಡ .... ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಕಾರಣ.... ಎಂದು ಗಾನಿಸಿದ್ದಾಳೆ. ಅವಳು ಇನ್ನೂ ಸೊಗಸಾಗಿ ಹೇಳುವ ಈ ನುಡಿಮುತ್ತಿನಲ್ಲಿ ಎನಿತೊಂದು ಅರ್ಥ ಸಂಪತ್ತು ತುಂಬಿದೆ ಅಂತ ಅನುಭವಿಸಿ ನೋಡಿ.....

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು
ಭಾವ ಶುದ್ಧ ಇಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು
ಹೃದಯ ಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ
ಚೆನ್ನಮಲ್ಲಿಕಾರ್ಜುನಾ !!

ನಮ್ಮ ಮನಸ್ಸಿನ ಸಮಗ್ರ ಸಂಸ್ಕಾರವೇ ಒಟ್ಟಾರೆಯಾಗಿ ನಮ್ಮ ಸ್ವಭಾವ. ಈ ಮಾನಸಿಕ ವಿಭಿನ್ನತೆಗಳನ್ನೆ ಮಾನದಂಡವಾಗಿ ಇರಿಸಿ ಕೊಂಡು ಜನಸಾಮಾನ್ಯರು ಕೂಡ .... ಪಾಪಿ, ಕೋಪಿ, ತಾಪಿ, ಕ್ರೋಧಿ, ಅಹಂಕಾರಿ, ದ್ವೇಷಿ, ಕಾಮಿ, ಆಲಸಿ, ಆಸೆಬುರುಕ, ಸಜ್ಜನ, ಸತ್ಯವಂತ, ಸಂಯಮಿ, ವಿನಯವಂತ, ಮುಗ್ಧ, ಮಧುರ, ಇಲ್ಲವೆ ಮುಗ್ಗುಲಗೇಡಿ, ಮಾನಗೇಡಿ, ಯಡ್ಡ, ಮಡ್ಡ, ಕಗ್ಗ.... ಎಂಬ ಸಾವಿರಾರು ಬಳಕೆಮಾತಿನ ಸಾಮಾನ್ಯ ಪದ ಗಳನ್ನು ಆಡುಮಾತಿನಲ್ಲಿ ಬಳಸುತ್ತಾರೆ.

ಜನಪದ ನುಡಿಗಳಲ್ಲಿ ಕೂಡ ಸ್ವಭಾವ-ಸಂಸ್ಕಾರಗಳ ಕುರಿತಾಗಿ ಎಷ್ಟೊಂದು ಸೂಕ್ತಿಗಳಿವೆ! ಮನಸಿನಂತೆ ಮಾದೇವಾ..... ಮನಸಿದ್ದಲ್ಲಿ ಮಾರ್ಗವುಂಟು..... ಒಳ್ಳೆಯವರ ಗೆಳೆತನ ಕಲ್ಲು ಸಕ್ಕರಿ ಹಾಂಗ..... ಕುಲ್ಲರ ಗೆಳೆತನ ಮಾಡಿದರ ನನ ತಮ್ಮ ಸಲ್ಲದ ಮಾತು ಬರತಾವ... ಎಂದು ಗಮನಿಸಬಹುದು.

ಅಲ್ಲದೆ; ಗುಣಹೀನರ ಗೆಳೆತನ ಹಣವ ಕೊಟ್ಟರೂ ಬೇಡ.... ಗುಣ ದೊಡ್ಡದೊಂದು ಸಮುದರ ಸಂಗಾತ.... ಮುಣುಗಿ ಹೋದರು ಮೋಕ್ಷಾವು....

-ಇದ್ದರ ಇರಬೇಕು ಬುದ್ಧಿವಂತರ ನೆರೆಯು.... ಬುದ್ಧಿಗೇಡಿ ಕುಲಗೇಡಿ ನೆರೆಯಿದ್ದು ಇದ್ದಷ್ಟು ಬುದ್ಧಿ ಕಳಕೊಂಡ...

-ಮಂದಿ ಮಕ್ಕಳೊಳಗ ಚಂದಾಗ್ಹೊಂದಿರಬೇಕ... ನಂದೀಯ ಶಿವನ ದಯದಿಂದ ಹೋಗಾಗ ಮಂದಿ ಬಾಯಾಗ ಇರಬೇಕ....

-ಬಾತೀಗಿ ಬಾರದ್ದು ಯಾತಕ ನೆನೆಯಲಿ.... ಜಾತಮಲ್ಲಿಗೀ ನನ ಮನವೆ ಬಾಯಾನ ಜಾಕೇರಿ ಮಾಡಿ ಉಗುಳೇನ.... ! ಜಾಕಣಿ ಅಂತ ಹಿಂದೆ ಹಲ್ಲುತಿಕ್ಕುವ ಹಲ್ಲಿಟ್ಟು ಇತ್ತು. ಇದರ ಗಂಜಳದಂತೆ ವ್ಯರ್ಥಮಾತು.

ಇದಲ್ಲದೇ ಇಲ್ಲಿ ಕೇಳಿ.... ಎಲ್ಲ್ಯಾರ ಇರಲೆವ್ವ ಹುಲ್ಲಾಗಿ ಬೆಳೆಯಲಿ.... ನೆಲ್ಲಿ ಬಡ್ಯಾಗಿ ಚಿಗಿಯಲಿ ಕಂದಯ್ಯ..... ಜಯವಂತನಾಗಿ ಬೆಳೆಯಲಿ.....

-ಆಚಾರಕ್ಕರಸಾಗು ನೀತಿಗೆ ಪ್ರಭುವಾಗು.. ಮಾತಿನಲಿ ಚೂಡಾಮಣಿಯಾಗು....ನನ ಕಂದಾ ಜ್ಯೋತಿಯೇ ಆಗು ಜಗಕ್ಕೆಲ್ಲ....

ನಿಜ... ಜಾತಿಗಿಂತ ಜ್ಯೋತಿ ದೊಡ್ಡಾಕಿ....! ಜ್ಯೋತಿಗಿಂತ ಪ್ರೀತಿ ದೊಡ್ಡಾಕಿ ! ಇದೇ ನಮ್ಮ ಸ್ವಭಾವ ಸಂಸ್ಕಾರಗಳನ್ನು ಅಳೆಯುವ ಮಾನದಂಡ !! ✽

---

**ಬ**ಹಳ ಕಷ್ಟಪಟ್ಟು ದುಡಿಯುತ್ತಿದ್ದವನೊಬ್ಬ ಸತ್ತು ಹೋದ. ಸ್ವರ್ಗಕ್ಕೆ ಹೋದ ಅವನು ದೇವರನ್ನು ಪ್ರತ್ಯಕ್ಷ ಕಂಡಾಗ ಕೇಳಿದ: ''ದೇವರೇ, ನೀನೇಕೆ ಮನುಷ್ಯನನ್ನು ಮುದುಕನನ್ನಾಗಿ ಮಾಡುವೆ? ನಮ್ಮ ಸಂಪತ್ತನ್ನೆಲ್ಲ ಒಂದೊಂದಾಗಿ ನೀನು ದೋಚುವೆ — ನಮ್ಮ ಶಕ್ತಿ, ಬಲ, ವೇಗ, ಚುರುಕುತನ - ಎಲ್ಲವನ್ನೂ ನಾವು ಕಳೆದುಕೊಂಡು, ಕೊನೆಗೆ ನಾವು ಮೂಳೆಚಕ್ಕಳವಾಗಿ ಬಿಡುವೆವು!''

ದೇವರು ಹೀಗೆ ಉತ್ತರಿಸಿದ: ''ಮಗೂ, ಮುದುಕರಾಗುವುದು ಶಾಪವಲ್ಲ; ಅದು ನಿನಗೊಂದು ವರ. ಮುದಿತನ ಬಂದಾಗ ನೀನು ಪ್ರೌಢನಾಗುವೆ, ವಿವೇಕಿಯಾಗುವೆ. ಆಗ ನೀನು ದೇಹವಲ್ಲ, ಈ ಪ್ರಪಂಚಕ್ಕೆ ಸೇರಿದವನಲ್ಲ ಎಂದು ನಿನಗೆ ತಿಳಿಯುವುದು. ನೀನು ನನಗೆ ಸೇರಿದವನು — ನಾನು ನಿನ್ನ ದಿವ್ಯ ತಂದೆ - ಇದು ನಿನಗೆ ಅರ್ಥವಾಗುವುದು.''

'ಕೊಟ್ಟಷ್ಟು ಪಡೆವೆ, ಕಳಕೊಂಡಷ್ಟೂ ಪಡೆವೆ' ಎಂದು ಒಂದು ಗಾದೆ ಹೇಳುತ್ತದೆ. ಬಾಲ್ಯವನ್ನು ಕಳೆದುಕೊಳ್ಳುತ್ತೇವೆ; ಯೌವನವನ್ನು ಪಡೆಯುತ್ತೇವೆ. ಯೌವನವನ್ನು ಕಳೆದುಕೊಳ್ಳುತ್ತೇವೆ, ಆಗ ಪ್ರೌಢರಾಗುತ್ತೇವೆ. ಜೀವನದ ಪ್ರತಿಯೊಂದು ಅವಸ್ಥೆಯಲ್ಲೂ ನಾವು ಏನನ್ನೋ ಕಳೆದುಕೊಳ್ಳುತ್ತೇವೆ; ಇನ್ನೇನನ್ನೋ ಪಡೆಯುತ್ತೇವೆ.

*(ಜೆ.ಪಿ.ವಾಸ್ವಾನಿಯವರ 'Immortal Stories' ಗ್ರಂಥದಿಂದ)*